# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಪೂರಕ ಅಂದಾಜು(ಮೊದಲನೇ ಕಂತು)ನಲ್ಲಿ ಒದಗಿಸಿದ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-**
1. 2021-22ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-5.
2. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 03 ಬಿಎಸ್‌ಜಿ 2022, ದಿನಾಂಕ:19.10.2022

******

**ಪ್ರಸ್ತಾವನೆ:-**

ಮೇಲೆ ಓದಲಾದ (1) ರಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಅನುದಾನವನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆರ್ಥಿಕ ಇಲಾಖೆಯ ಪತ್ರದಲ್ಲಿ 2022-23ನೇ ಸಾಲಿನ ಪೂರಕ ಅಂದಾಜುಗಳು(ಮೊದಲನೇ ಕಂತು) ವಿಧಾನ ಮಂಡಲದ ಎರಡೂ ಸದನಗಳ ಮುಂದೆ 2022ರ ಸೆಪ್ಟೆಂಬರ್ ತಿಂಗಳಲ್ಲಿ ಮಂಡಿಸಿದ್ದು, ಇದಕ್ಕೆ ಸಂಬಂದಿಸಿದಂತೆ ಧನವಿನಿಯೋಗ ವಿಧೇಯಕ 2022ಕ್ಕೆ ಅಕ್ಟೋಬರ್ ತಿಂಗಳ 17ನೇ ದಿನಾಂಕದಂದು ಸನ್ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆ ದೊರೆತಿದ್ದು, ದಿನಾಂಕ:18.10.2022ರ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 25 ಶಾಸನ 2022ರಲ್ಲಿ ಸದರಿ ಮೊತ್ತವನ್ನು ಉಪಯೋಗಿಸುವಾಗ ಮಿತವ್ಯಯ ಆದೇಶ ಮತ್ತು ಇತರೆ ಆರ್ಥಿಕ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ. ಪೂರಕ ಅಂದಾಜುಗಳಲ್ಲಿ ಒದಗಿಸಲಾದ ಮೊತ್ತವನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಲು ಇಲಾಖಾ ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಿದೆ ಹಾಗೂ ಯಾವುದೇ ಕಾರಣಕ್ಕೆ ಪೂರಕ ಅಂದಾಜುಗಳಲ್ಲಿ ಒದಗಿಸಿರುವ ಮೊತ್ತವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಉಪಯೋಗಿಸಲು ಆಗದ್ದಿದಲ್ಲಿ, ದಿನಾಂಕ:31.03.2023ರ ಒಳಗಾಗಿ ತಪ್ಪದೇ ಸರ್ಕಾರಕ್ಕೆ ಅಧ್ಯರ್ಪಣೆ ಮಾಡುವುದು ಎಂದು ಸೂಚಿಸಿದೆ ಎಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 665 ಬಿಎಂಎಸ್ 2022**
**ಬೆಂಗಳೂರು, ದಿನಾಂಕ: 17.11.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಬಂದಿಸಿದಂತೆ ಈ ಮುಂದಿನ ಯೋಜನೆಗಳ ಅನುಷ್ಠಾನಕ್ಕಾಗಿ ಪೂರಕ ಅಂದಾಜು-1ರಲ್ಲಿ ಒದಗಿಸಿರುವ ಅನುದಾನವನ್ನು ಆಯುಕ್ತರು,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

17/11/22

2...

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ ಹಾಗೂ ಲೆಕ್ಕಶೀರ್ಷಿಕೆ | ಪೂರಕ ಅಂದಾಜು-1 ರಲ್ಲಿ ಒದಗಿಸಿದ ಅನುದಾನ | ಬಿಡುಗಡೆ ಮಾಡಬೇಕಾದ ಅನುದಾನ |
|---|---|---|---|
| 1 | ವಿವಿಧ ಸಮುದಾಯಗಳ ಅಭಿವೃದ್ಧಿ 2225-03-001-0-05-103 | | |
| | ಡಾ|| ಜಸ್ಟಿಸ್ ಕೆ. ಭಕ್ತವತ್ಸಲ್ ಆಯೋಗಕ್ಕೆ | 26.00 | 26.00 |
| | ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ | 900.00 | 900.00 |
| | ಕರ್ನಾಟಕ ಕಾಡುಗೊಲ್ಲ ಅಭಿವೃದ್ಧಿ ನಿಗಮ | 1700.00 | 1700.00 |
| | ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ | 500.00 | 500.00 |
| | ಕರ್ನಾಟಕ ಮರಾಠಾ ಅಭಿವೃಧ್ಧಿ ನಿಗಮ | 6000.00 | 6000.00 |
| | ಶ್ರೀ ಗವಿಸಿದ್ದೇಶ್ವರ ಮಠ, ಕೊಪ್ಪಳ | 1000.00 | 1000.00 |
| | **ಒಟ್ಟು** | **11126.00** | **11126.00** |
| 2 | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ 2225-03-190-0-04-106 | 10000.00 | 10000.00 |
| 3 | ವಿಶ್ವಕರ್ಮ ಅಭಿವೃದ್ಧಿ ನಿಗಮ 2225-03-190-0-05-059 | 1500.00 | 1500.00 |
| 4 | ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ 2225-03-190-0-07-106 | 1400.00 | 1400.00 |
| 5 | ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ 2225-03-190-0-08-106 | 750.00 | 750.00 |
| 6 | ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ 2225-03-190-0-09-100 | 10000.00 | 10000.00 |
| 7 | ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ 2225-03-190-0-10-100 | 10500.00 | 10500.00 |

3..

17/11/22

| | | | |
|---|---|---|---|
| 8 | ಹಿಂದುಳಿದ ವರ್ಗದವರಿಗೆ ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ(ಕ್ರೈಸ್) 2225-03-277-2-62-059 | | |
| | ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳ ಪ್ರಾರಂಭ ಮತ್ತು ನಿರ್ವಹಣೆ | 4000.00 | |
| | ಖಾಯಂ ಭೋದಕ/ಭೋದಕೇತರ ಸಿಬ್ಬಂದಿಗಳಿಗೆ ಉದ್ಯೋಗದಾತರ ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ವಂತಿಗೆಯನ್ನು ಶೇ.10% ರಿಂದ ಶೇ.14% ಕ್ಕೆ ಹೆಚ್ಚಿಸಲಾಗಿರುವ ವಂತಿಗೆ ಪಾವತಿಸಲು ಅನುದಾನ | 988.00 | |
| | **ಒಟ್ಟು** | **4988.00** | **4988.00** |
| 9 | ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ, ಬೈಲಹೊಂಗಲ 2225-03-277-2-71 | | |
| | ವೇತನಗಳು-101 | 1.00 | 1.00 |
| | ಆಸ್ತಿಗಳ ಸೃಜನೆ-102 | 1.00 | 1.00 |
| | ಸಾಮಾನ್ಯ-103 | 1.00 | 1.00 |
| | ಗುತ್ತಿಗೆ/ಹೊರ ಗುತ್ತಿಗೆ-115 | 1.00 | 1.00 |
| | **ಒಟ್ಟು** | **4.00** | **4.00** |
| 10 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ 4225-03-277-2-06-386 | 5400.00 | 5400.00 |
| | **ಒಟ್ಟು ಅನುದಾನ** | **55668.00** | **55668.00** |

**<u>ಷರತ್ತುಗಳು:</u>**

1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಹಣವನ್ನು ಡ್ರಾ ಮಾಡಲು ಸಲ್ಲಿಸುವ ಲೆಕ್ಕಶೀರ್ಷಿಕೆವಾರು ಸ್ವೀಕರ್ತನ ರಸೀದಿ ಬಿಲ್ಲುಗಳಿಗೆ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮೇಲು ರುಜು ಪಡೆದು ಹಣ ಡ್ರಾ ಮಾಡತಕ್ಕದ್ದು.
2. ಬಿಡುಗಡೆ ಮಾಡಿರುವ ಅನುದಾನವನ್ನು ಸೆಳೆಯುವ ಪೂರ್ವದಲ್ಲಿ ಸಂಬಂಧಪಟ್ಟ ನಿಗಮಗಳು ಆಯವ್ಯಯದಲ್ಲಿ ಒದಗಿಸಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ರೂಪಿಸಿ ಸರ್ಕಾರದ ಅನುಮೋದನೆ ಪಡೆದ ನಂತರವೇ ಅನುದಾನವನ್ನು ಸೆಳೆಯತಕ್ಕದ್ದು.

17/11/22